ಸಿಂಧೂರು ಎ.ಪಿ.ಎಂ.ಸಿ ಮಾರ್ಕೆಟ್‌ನಿಂದ ಖರೀದಿ ಮಾಡುತ್ತಿಲ್ಲ, ಇದಕ್ಕೆ ಕಾರಣವೇನು? ಹೋದ ವರ್ಷ ಬೆಳೆದ ಹತ್ತಿ ಬೆಳೆಯೂ ಉದೇ, ಈ ವರ್ಷದ್ದು ಉದೇ. ಹೋದ ವರ್ಷ 2 ಸಾವಿರ ರೂಪಾಯಿ ಬೆಲೆ ಏಕೆ? ಈ ವರ್ಷ 1800 ರೂಪಾಯಿ ಬೆಲೆ ಏಕೆ? ಸಿಂಧನೂರು ಕ್ಷೇತ್ರದಲ್ಲಿ ನೆರೆ ಹಾವಳಿಯಿಂದ ರೈತರಿಗೆ ಬಹಳ ಪೆಟ್ಟಾಗಿದೆ. ಸುಮಾರು ೨೦ದು ಲಕ್ಷ ಎಕರೆ ನೀರಾವರಿ ಭೂಮಿಯಲ್ಲಿ 30-35 ಸಾವಿರ ಎಕರೆಯಲ್ಲಿ ಬೆಳೆದಂತೆ ಹತ್ತಿ ಬೆಳೆ ನಾಶವಾಗಿದೆ. ಆ ರೈತರಿಗೆ ಸರ್ಕಾರದ ವತಿಯಿಂದ ಏನಾದರೂ ರಸಗೊಬ್ಬರಗಳು ಸಬ್ಸಿಡಿ ರೂಪದಲ್ಲಿ ಬೊರೆಯುವುದಾದರೆ ಕೊಡಿಸಿ. ಸಬ್ಸಿಡಿಗಾಗಿ ಕೇಂದ್ರ ಸರ್ಕಾರದಿಂದ 12 ಕೋಟಿ ರೂಪಾಯಿ ಕೂಡ ಖರ್ಚಾಗಿಲ್ಲವೆಂದು ನಿನ್ನೆ ಸದನದಲ್ಲಿ ಹೇಳುತ್ತಿದ್ದಿರಿ. ಆ ಧನಸಹಾಯವನ್ನು ರೈತರಿಗೆ ಒದಗಿಸುವುದಕ್ಕೆ ಸಾಧ್ಯವ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗಾಗಲೇ ಮಾರ್ಕೆಂಟಿಂಗ್ ಫೆಡರೇಷನ್ ಹತ್ತಿರ ಸುಮಾರು 10-15 ಸಾವಿರ ಬೇಲ್ ಹತ್ತಿ ಸ್ಟಾಕ್ ಇದೆ. ಅದು ವ್ಯಾಪಾರವಾಗುವ ಪರಿಸ್ಥಿತಿಯಲ್ಲಿಲ್ಲ, ಆದರೆ ರೈತರಿಗೆ ಹಿತದೃಷ್ಟಿಯಿಂದ ಇನ್ನು ಹೆಚ್ಚು ಹತ್ತಿ ಕೊಳ್ಳಬೇಕಾದ ಪರಿಸ್ಥಿತಿ ಇದೆ. ಅವರು ಎಷ್ಟರ ಮಟ್ಟಿಗೆ ಇದನ್ನು ಮಾಡುವುದಕ್ಕೆ ಸಿದ್ಧರಾಗಿದ್ದಾರೆಂಬ ಪ್ರಶ್ನೆ ಅವಲಂಬಿಸುತ್ತದೆ. ಮಾನ್ಯ ಸದಸ್ಯರು, ಹತ್ತಿ ಬೆಳೆಯತಕ್ಕ ರೈತರು ಮತ್ತು ಆಸಕ್ತಿಯುಳ್ಳ ರೈತರು ಸೇರಿ ಈ ವಿಷಯವನ್ನು ಪರ್ಯಾಲೋಚನೆ ಮಾಡಿ ಮುಂದೆ ಏನು ಮಾಡಬಹುದೆಂದು ತಿಳಿಸುವುದಕ್ಕೆ ಸಾಧ್ಯವಿದೆ.

ಶ್ರೀ ಬಿ. ಹಂಪನಗೌಡ : ನನ್ನ ಕ್ಷೇತ್ರದಲ್ಲಿ ಹತ್ತಿ ನಿಗಮದಿಂದ ಇಮನರಿಗೆ ಹತ್ತಿ ಖರೀದಿ ಮಾಡುತ್ತಿಲ್ಲ, ಯಾವಾಗ ಮಾಡಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅವರ ಹತ್ತಿರ 10 ರಿಂದ 15 ಸಾವಿರ ಬೇಲ್ ಹತ್ತಿ ಸಿದ್ಧವಾಗಿದೆ. ಅದೇ ಮಾರಾಟವಾಗುತ್ತಿಲ್ಲ. ಅದುದರಿಂದ, ನೀವು ಮೂರಾಟ ಮಾಡಲೇಬೇಕೆಂದು ನಾವು ಒತ್ತಾಯ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ, ಫೆಡರೇಷನ್‌ನವರು ಸ್ವತಂತ್ರವಾಗಿ ಇದನ್ನು ಕೊಳ್ಳುವುದ್ದಾಗಲಿ ಅಥವಾ ಯಾವ ರೇಟನ್ನು ಕೊಡಬೇಕೆಂಬ ವಿಷಯದಲ್ಲಾಗಲಿ ಅವರಿಗೆ ಪೂರ್ಣ ಸ್ವತಂತ್ರ್ಯ ಇದೆ. ಆದುದರಿಂದ ನಾವು ಒಂದು ಸಭೆ ಸೇರಿ ಯಾವ ರೀತಿ ಮಾಡಬೇಕೆಂದು ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀ ಬಿ. ಹಂಪನಗೌಡ : ಹತ್ತಿ ನಿಗಮದಲ್ಲಿ ಹತ್ತಿ ಹೆಚ್ಚಾಗಿದೆ ಎಂದು ಸಚಿವರು ಹೇಳಿದರು ಹಾಗಾದರೆ ವಿದೇಶದಿಂದ ಏತಕ್ಕೆ ಆಮದು ಮಾಡಿಕೊಳ್ಳುತ್ತಾರೆ?

ಉಪಾಧ್ಯಕ್ಷೆಣಿಯವರು : ಎಷ್ಟು ಕ್ವಾರಿಫಿಕೇಷನ್ ಕೇಳುವುದು, ಕುಳಿತುಕೊಳ್ಳಿ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಸುವ ನೇಕಾರರಿಗೆ ಆಗಿರುವ ತೊಂದರೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷೆಣಿಯವರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಸುವ ನೇಕಾರರಿಗೆ ಆಗಿರುವ ತೊಂದರೆ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಣಿಯವರೆ, ತಮ್ಮ ಅನುಮತಿ ಕೋರಿ ಈ ಪ್ರಶ್ನೆಯನ್ನು ನೀಡ ಬಯಸುತ್ತೇನೆ.

(ಹೇಳಿಕೆ ಲಗತ್ತಿಸಿದೆ)

"ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಕೆಯಿಂದ ಜೀವಿಸುವ ಕುಟುಂಬವರಿಗೆ 3000 ಮಗ್ಗಗಳಿದ್ದು, ಉತ್ತಮ ದರ್ಜೆ ಹಾಗೂ 2ನೇ ದರ್ಜೆ ಬಳ್ಳ ಬಣ್ಣದ ಉಣ್ಣೆ ಪರದೇಶಕ್ಕೆ ರಫ್ತಾಗುತ್ತಿರುವ ಕಾರಣ ಎಲ್ಲಾ ಮಗ್ಗಗಳೂ ಮುಚ್ಚಿದ್ದು, ಕಂಬಳಿ ತಯಾರಿಕೆಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಗಮನ ಸೆಳೆದ ಬಗ್ಗೆ ಉತ್ತರ.

ಚಿಕ್ಕನಾಯಕನಹಳ್ಳಿಯಲ್ಲಿ, ಒಂದು ಕಂಬಳಿ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ಇದ್ದು ಅದಕ್ಕೆ ಮಂಡಳಿಯು ಬಹಳ ಹಿಂದೆ ಧನಸಹಾಯವನ್ನು ನೀಡಿತ್ತು. ಆದರೆ ಸಂಸ್ಥೆಯು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದವರು ನಿಗದಿಪಡಿಸಿರುವ ನಿಯಮಗಳಿಂತೆ ಉತ್ಪಾದನೆ ಮತ್ತು ಮಾರಾಟ ಮಾಡದೆ ಇದ್ದುದರಿಂದ ಮಂಡಳಿಯು ಯಾವ ಹೆಚ್ಚುವರಿ ಸಾಲವನ್ನು ನೀಡಿಲ್ಲ, ಮತ್ತು ಹಿಂದೆ ಬಿಡುಗಡೆ ಮಾಡಿದ ಸಾಲವನ್ನು ಪೂರ್ತಿಯಾಗಿ ವಸೂಲು ಮಾಡಲಾಗಿದೆ. ಸದರಿ ಸಹಕಾರ ಸಂಘ ಮೇಲಿನ ಕಾರಣಕ್ಕೊಸ್ಕರ ಮಂಡಳಿಯ ಸಂಬಂಧವನ್ನು ಕಡಿದುಕೊಂಡಿಗೆ.

ಇತ್ತೀಚೆಗೆ ಸಂಸ್ಥೆಯು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಇವರೊಡನೆ ಸಂಬಂಧ ಕಲ್ಪಿಸಲು ಇವ್ವ ನಿಯಮಾವಳಿಗಳು ರದ್ದುಪಡಿಸಿಕೊಂಡು ತಿದ್ದುಪಡಿಯನ್ನು ಮಾಡಿಸಿಕೊಂಡಿರುವುದರಿಂದ ಮಂಡಳಿಯ ಕಾರ್ಯವ್ಯಾಪ್ತಿಯಿಂದ ಆಚೆ ಉಳಿದಿದೆ.

ಸಂಸ್ಥೆಯು ಖಾದಿ ಮಂಡಳಿಯ ನಿಯಮದಂತೆ ಕೆಲಸ ಮಾಡುವುದಾದರೆ ಅದಕ್ಕೆ ಮಂಡಳಿಯಿಂದ ಎಲ್ಲಾ ಸಹಾಯ ಸವಲತ್ತು ದೊರೆಯುವುವು.

ಮಂಡಳಿಯ ನಿಯಮಗಳನ್ನು ಅನುಸರಿಸುತ್ತಿರುವ ಇತರೆ ಕಂಬಳಿ ಉತ್ಪಾದನಾ ಸಹಕಾರ ಸಂಘಗಳು ನಡೆಯುತ್ತಲಿದ್ದು, ಉಣ್ಣೆ ಅಭಾವದ ಬಗ್ಗೆ ದೂರು ನೀಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಈಗ ಮಾನ್ಯ ಸಚಿವರು ಕೊಟ್ಟಂತಹ ಉತ್ತರದಿಂದ ನನಗಂತೂ ತೃಪ್ತಿ ಸಿಗಲಿಲ್ಲ, ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ಇದು ಒಂಗನೆಯ ಮತ್ತು ಎರಡನೆಯ ದರ್ಜೆಯ ಕಂಬಳಿ ಇದೆ, ಅನು ಹೊರದೇಶಗಳಿಗೆ ರಫ್ತಾಗುತ್ತಿರುವ ಕಾರಣ ಕಂಬಳಿ ಇಲ್ಲಿ ಸಿಗುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸಿಕ್ಕತಕ್ಕ ಮೂರನೇ ದರ್ಜೆ ಏನಿದೆ ಆ ದರ್ಜೆಯ ಬೆಲೆ ಸುಮಾರು 8 ರೂಪಾಯಿ ಇರುತ್ತಿದ್ದುದು ಈಗ 20 ರೂಪಾಯಿ ಆಗಿದೆ. ಅದನ್ನು ತೆಗೆದುಕೊಂಡು ಹೋಗಿ ಕಂಬಳಿ ಮಾಡಿದರೆ ಮಾರಾಟ ಮಾಡುವುದಕ್ಕಾಗುವುದಿಲ್ಲ, ಹೀಗಾಗಿ 3 ಸಾವಿರ ಮಗ್ಗಗಳು ಮುಚ್ಚಿಹೋಗಿವೆ.

ಇವತ್ತು ಉಣ್ಣೆ ಸಿಕ್ಕದೇ ಇರುವ ಕಾರಣದಿಂದ ನಿಂತಿದೆ. ರಫ್ತು ಆಗುತ್ತಿರುವುದರಿಂದ ಮುಚ್ಚಿದೆ. ಇವತ್ತು ನೇಕಾರರ ಜೀವನ್ಮರಣದ ಪ್ರಶ್ನೆ ಇದೆ. ಸರ್ಕಾರ "ವಿಶ್ವ" ಕಾರ್ಯಕ್ರಮವನ್ನು ಜಾರಿಗೆ ತರುತ್ತಿರುವಂತಹ ಈ ಸಂದರ್ಭದಲ್ಲಿ, ಇಂತಹ ಗೃಹ ಕೈಗಾರಿಕೆಗಳು ಮುಚ್ಚಿಹೋಗುತ್ತಿವೆ. ಈ ನೇಕಾರರ ದೃಷ್ಟಿಯಿಂದ ಕಾರ್ಯಕ್ರಮಗಳು ಏನು? ಕೈಗಾರಿಕೆ ಬಗ್ಗೆ ವಿಚಾರ ಒಂದು ಕಡೆ ಇರಲಿ, ಈ ನೇಕಾರರ ಜೀವನ್ಮರಣದ ಪ್ರಶ್ನೆಗೆ ಏನು ಉತ್ತರ ಎಂದು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರ ಜೊತೆ ಮಾತನಾಡಿಕೊಂಡು ಇದಕ್ಕೆ ಒಂದು ಪರಿಹಾರವನ್ನು ಹುಡುಕುತ್ತೇನೆ.

ನಿಯಮ 334ರ ಮೇರೆಗೆ

ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳನ್ನು ಹಾಗೂ ಸಂಚಾರ ವ್ಯವಸ್ಥೆಗಳನ್ನು ಉತ್ತಮಪಡಿಸಲು ಉನ್ನತಮಟ್ಟದ ಸಮಿತಿ ರಚನೆ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಉಪಾಧ್ಯಕ್ಷೆಯವರೆ, ಬೆಂಗಳೂರು ನಗರದಲ್ಲಿ ವಾಹನ ಅಪಘಾತಗಳು ಹೆಚ್ಚಾಗುತ್ತಿದ್ದು, ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಸಂಚಾರ ವ್ಯವಸ್ಥೆಯನ್ನು ಉತ್ತಮಪಡಿಸುವುದು ಅಗತ್ಯವಾಗಿದೆ. ಕೆಲವಾರು ಜಾಗಗಳಲ್ಲಿ ಹೊಸದಾಗಿ ಸಿಗ್ನಲ್ ದೀಪಗಳನ್ನು ಹಾಕಬೇಕಾಗಿದೆ. ಕೆಲವಾರು ರಸ್ತೆಗಳನ್ನು ಅಗಲಮಾಡಬೇಕಾಗಿದೆ ಹಾಗೂ ಕೆಲವು ರಸ್ತೆಗಳಲ್ಲಿ ಏಕಮುಖ ಮಾರ್ಗ ವಿಧಿಸಬೇಕಾಗಿದೆ. ಇದರ ಜೊತೆಗೆ ಕೆಲವು ರಸ್ತೆಗಳಲ್ಲಿ ಕೆಲವಾರು ವಾಹನಗಳ ನಿರ್ಬಂಧವನ್ನು ವಿಧಿಸಬೇಕಾಗಿದೆ. ಆಟೋರಿಕ್ಷಾ ನಿಲ್ದಾಣವನ್ನು ಹಲವಾರು ಭಾಗಗಳಲ್ಲಿ ನಿರ್ಮಿಸಬೇಕಾಗಿದೆ. ಈಗ ಬಸ್ ನಿಲ್ದಾಣಗಳ ಬಳಿಯಲ್ಲಿಯೇ ಆಟೋರಿಕ್ಷಾಗಳು ನಿಲ್ಲಿಸಿ ಬಸ್ ಹತ್ತುವ ಪ್ರಯಾಣಿಕರಿಗೆ ತೊಂದರೆಯುಂಟಾಗಿದೆ. ಆದ್ದರಿಂದ ಬೆಂಗಳೂರು ನಗರದ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಲು ಹಾಗೂ ಅಪಘಾತಗಳನ್ನು ತಪ್ಪಿಸಲು ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) : ಸನ್ಮಾನ್ಯ ಉಪಾಧ್ಯಕ್ಷೆಯವರೇ, ಈ ಬಗ್ಗೆ ನಿನ್ನೆ ತಾನೆ ಕೆಲವು ಹೇಳಿಕೆಗಳನ್ನು ನಾನು ಕೊಟ್ಟಿದ್ದೆ. ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲವು ಉನ್ನತ ಸಮಿತಿಗಳನ್ನು ನಾವು ಮಾಡುತ್ತೇವೆಂದು ಹೇಳಿದ್ದೆ. ಅದನ್ನು ಮಾಡುತ್ತಿದ್ದೇವೆ. ಇನ್ನು ಎರಡನೆಯದಾಗಿ, ಈ ಬೆಂಗಳೂರು ನಗರಕ್ಕೆ ತನ್ನದೇ ಆದ ಸೀಮಿತ ಸಮಸ್ಯೆಗಳು ಇವೆ. ಅವನ್ನು ಪರಿಹಾರ ಮಾಡುವುದಕ್ಕೆ ಮತ್ತು ಇದರ ಬಗ್ಗೆ ಎಲ್ಲಾ ಇಡೀ ಕರ್ನಾಟಕ ರಾಜ್ಯದ ಈ ಅಪಘಾತಗಳನ್ನು ತಪ್ಪಿಸುವ ಬಗ್ಗೆ ಉನ್ನತಾಧಿಕಾರಿಗಳಾದ ದಿನಕರ್‌ರವರು ವರದಿ ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿ ಇವೆ. ವರದಿಯಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬಾ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ರೈತರಿಗೆ ಹೆಚ್ಚು ನೀರಾವರಿ ತೆರಿಗೆ

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷೆಯವರೇ, ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬಾ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಬರುವ ಜಮೀನುಗಳಿಗೆ ನೀರಾವರಿ ತೆರಿಗೆ ಎಕರೆ 1ಕ್ಕೆ 35-00 ರೂಪಾಯಿ ನಿಗದಿ ಮಾಡಿದ್ದರೂ ಸಹ ನೀವು ಅರೆ ಖುಷ್ಕಿ ಬೆಳೆ ಬೆಳೆಯದೆ ಭತ್ತವನ್ನು